ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

**ಸಂಖ್ಯೆ : ವಾಇ : ಜಂ ನಿ : ಸುಮಪ : 2020–21** **ದಿನಾಂಕ : 21–09–2020**

# ಪತ್ರಿಕಾ ಪ್ರಕಟಣೆ

## "ಆಯುಷ್ಮಾನ್ ಭಾರತ್–ಆರೋಗ್ಯಕರ್ನಾಟಕ"

**ಬೆಂಗಳೂರು, ಸೆಪ್ಟಂಬರ್ 21 (ಕರ್ನಾಟಕ ವಾರ್ತೆ):**

ಆಯುಷ್ಮಾನ್ ಭಾರತ್ ((AB-PMJAY))ಯೋಜನೆಗೆದಿನಾಂಕ:23.09.2020ಕ್ಕೆಎರಡು ವರ್ಷ ಪೂರೈಸುತ್ತಿದೆ.. ಯೋಜನೆಯ ಪ್ರಮುಖಾಂಶಗಳು ಮತ್ತು ಪ್ರಗತಿಯ ವಿವರ ಈ ಕೆಳಕಂಡಂತಿದೆ.

- ರಾಜ್ಯದ ಎಲ್ಲ ನಿವಾಸಿಗಳಿಗೆ "ಆರೋಗ್ಯ ಕರ್ನಾಟಕ" ಎಂಬ ಸಾರ್ವತ್ರಿಕ ಆರೋಗ್ಯ ರಕ್ಷಣಾ ಯೋಜನೆಯನ್ನು ಕರ್ನಾಟಕ ಸರ್ಕಾರವು ದಿನಾಂಕ: 02.03.2018 ರಿಂದ ಅನುಷ್ಠಾನಗೊಳಿಸುತ್ತಿತ್ತು. ನಂತರ ಭಾರತ ಸರ್ಕಾರವು "ಆಯುಷ್ಮಾನ್ ಭಾರತ್" ಯೋಜನೆಯನ್ನು ಜಾರಿಗೊಳಿಸಿರುತ್ತದೆ. ಈ ಎರಡೂ ಯೋಜನೆಗಳ ಉದ್ದೇಶ, ವ್ಯಾಪ್ತಿಗಳಲ್ಲಿ ಹೋಲಿಕೆ ಇರುವುದರಿಂದ ಎರಡೂ ಯೋಜನೆಗಳನ್ನು ಸಂಯೋಜಿಸಿ 'ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ' ಎಂಬ ಯೋಜನೆಯನ್ನು ಭರವಸೆ ಮಾದರಿಯಲ್ಲಿ ದಿನಾಂಕ: 30.10.2018 ರಿಂದ ಅನುಷ್ಠಾನಗೊಳಿಸಲಾಗುತ್ತಿದೆ.
- ಕರ್ನಾಟಕ ರಾಜ್ಯದಲ್ಲಿ 'ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ' ಯೋಜನೆಯು ಒಂದು ಸಾರ್ವತ್ರಿಕ ಆರೋಗ್ಯ ರಕ್ಷಣೆ (UHC) ಯೋಜನೆಯಾಗಿದ್ದು, ರಾಜ್ಯದ ಎಲ್ಲ 6.50 ಕೋಟಿ ಜನರಿಗೆ ಆರೋಗ್ಯ ಸೇವೆ ಒದಗಿಸಲಾಗುತ್ತಿದೆ.
- ರಾಜ್ಯದ 115 ಲಕ್ಷ ಬಿ.ಪಿ.ಎಲ್ ಕುಟುಂಬಗಳಿಗೆ ಒಂದು ವರ್ಷಕ್ಕೆ ಒಂದು ಕುಟುಂಬಕ್ಕೆ ರೂ.5.00 ಲಕ್ಷಗಳವರೆಗೆ ಉಚಿತ ಚಿಕಿತ್ಸೆ ಒದಗಿಸಲಾಗುತ್ತದೆ.

- 19 ಲಕ್ಷ ಎ.ಪಿ.ಎಲ್ ಕುಟುಂಬಗಳಿಗೆ ಸಹ-ಪಾವತಿಆಧಾರದಲ್ಲಿಚಿಕಿತ್ಸೆಒದಗಿಸಲಾಗುತ್ತಿದ್ದು, ಇವರಿಗೆ ಸರ್ಕಾರಿ ಪ್ಯಾಕೇಜ್‌ದರದ ಶೇ.30 ರಷ್ಟು ನೆರವು ಲಭ್ಯವಿದ್ದು,ವಾರ್ಷಿಕ ಮಿತಿ ಒಂದು ಕುಟುಂಬಕ್ಕೆ ರೂ. 1.50 ಲಕ್ಷಇರುತ್ತದೆ.
- ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಯೋಜನೆಯ ಅಡಿಯಲ್ಲಿ ಒಟ್ಟು 1,650 ನಿಗಧಿತ ಚಿಕಿತ್ಸಾ ವಿಧಾನಗಳಿಗೆ ಚಿಕಿತ್ಸೆ ಒದಗಿಸಲಾಗುತ್ತಿದೆ.
- ಪಡಿತರ ಕಾರ್ಡ್ ಮತ್ತು ಆಧಾರ್ ಕಾರ್ಡ್‌ಗಳುಯೋಜನೆಯ ಮಾನದಂಡಗಳಾಗಿವೆ.
- ಜನರು ಕಾಯಿಲೆ ಬಂದಾಗ ಮೊದಲುತಮಗೆ ಹತ್ತಿರದಲ್ಲಿರುವ ಸರ್ಕಾರಿ ಆಸ್ಪತ್ರೆಗೆ ಭೇಟಿ ಹೋಗಬೇಕು. ಆ ಆಸ್ಪತ್ರೆಯಲ್ಲಿ ಚಿಕಿತ್ಸೆ ಲಭ್ಯವಿದ್ದರೆಅಲ್ಲಿಯೇಚಿಕಿತ್ಸೆ ನೀಡಲಾಗುತ್ತದೆ. ಒಂದೊಮ್ಮೆಚಿಕಿತ್ಸೆ ಲಭ್ಯವಿಲ್ಲದಿದ್ದರೆರೆಫರಲ್ ಪಡೆದುಕೊಂಡುರೋಗಿಯುಇಚ್ಚಿಸುವಯಾವುದೇನೋಂದಾಯಿತಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಳ್ಳಬಹುದು.
- 169 ತುರ್ತು ಚಿಕಿತ್ಸೆಗಳಿಗೆಯಾವುದೇರೆಫರಲ್‌ಇಲ್ಲದೆ ನೇರವಾಗಿ ನೋಂದಾಯಿತ ಆಸ್ಪತ್ರೆಗಳಿಗೆ ಹೋಗಿ ಚಿಕಿತ್ಸೆ ಪಡೆಯಬಹುದು.
- ಆಯುಷ್ಮಾನ್ ಭಾರತ್‌ಆರೋಗ್ಯಕರ್ನಾಟಕಯೋಜನೆಯಅಡಿಯಲ್ಲಿ ಕಳೆದ ಎರಡು ವರ್ಷಗಳಲ್ಲಿ 9.38 ಲಕ್ಷ ರೋಗಿಗಳು ಉಚಿತಚಿಕಿತ್ಸೆ ಪಡೆದುಕೊಂಡಿರುತ್ತಾರೆ.
- ಈ ಫಲಾನುಭವಿಗಳ ಚಿಕಿತ್ಸೆಗಾಗಿ ಸರ್ಕಾರವುರೂ. 1,950 ಕೋಟಿಗಳ ವೆಚ್ಚವನ್ನು ಭರಿಸಿರುತ್ತದೆ.
- ಆಯುಷ್ಮಾನ್ ಭಾರತ್‌ಆರೋಗ್ಯಕರ್ನಾಟಕಯೋಜನೆಯ ಫಲಾನುಭವಿಗಳ ಚಿಕಿತ್ಸೆಗಾಗಿ 3,391 ಕ್ಕೂ ಹೆಚ್ಚುಸಾರ್ವಜನಿಕ ಹಾಗೂ ಖಾಸಗಿ ಆಸ್ಪತ್ರೆಗಳನ್ನು ನೋಂದಾಯಿಸಿಕೊಳ್ಳಲಾಗಿದೆ.
- ಆಯುಷ್ಮಾನ್ ಭಾರತ್‌ಆರೋಗ್ಯಕರ್ನಾಟಕಯೋಜನೆಯಅಡಿಯಲ್ಲಿಈವರೆಗೆ 1.40ಕೋಟಿಆರೋಗ್ಯ ಕಾರ್ಡುಗಳನ್ನು ವಿತರಿಸಲಾಗಿದೆ.

**ಕೋವಿಡ್-19 ಚಿಕಿತ್ಸಾ ಸೌಲಭ್ಯ**

- ಇತ್ತೀಚಿನ ದಿನಗಳಲ್ಲಿ ಅತಿ ಹೆಚ್ಚು ಜನರನ್ನು ಬಾಧಿಸುತ್ತಿರುವ ಕೋವಿಡ್-19 ಸಾಂಕ್ರಾಮಿಕರೋಗಕ್ಕೂ ಸಹ ಆಯುಷ್ಮಾನ್ ಭಾರತ್‌ಆರೋಗ್ಯಕರ್ನಾಟಕಯೋಜನೆಯಡಿಯಲ್ಲಿಚಿಕಿತ್ಸೆಒದಗಿಸಲಾಗುತ್ತಿದೆ.
- ಸರ್ಕಾರದಖೋಟಾದಲ್ಲಿಚಿಕಿತ್ಸೆ ಪಡೆಯುವಕೋವಿಡ್ -19 ರೋಗಿಗಳಿಗೆ ಆಯುಷ್ಮಾನ್ ಭಾರತ್‌ಆರೋಗ್ಯಕರ್ನಾಟಕಯೋಜನೆಯಡಿಯಲ್ಲಿಉಚಿತಚಿಕಿತ್ಸೆಒದಗಿಸಲಾಗುವುದು.
- ಬಿ.ಪಿ.ಎಲ್ ಮತ್ತು ಎ.ಪಿ.ಎಲ್ ವರ್ಗದವರು, ವಲಸೆ ಕಾರ್ಮಿಕರು ಮತ್ತುಅಂತರ್‌ರಾಜ್ಯದಿಂದ ಮರಳಿದ ಕೋವಿಡ್ ರೋಗಿಗಳು ಉಚಿತಚಿಕಿತ್ಸೆ ಪಡೆಯಲುಅರ್ಹರಾಗಿರುತ್ತಾರೆ.
- ಸರ್ಕಾರಿಖೋಟಾದಲ್ಲಿಚಿಕಿತ್ಸೆ ಪಡೆಯುವಕೋವಿಡ್ ರೋಗಿಗಳಿಗೆ ರೆಮ್ಡಿಸಿವಿರ್ ಇಂಜೆಕ್ಷನ್‌ಉಚಿತವಾಗಿ ನೀಡಲಾಗುತ್ತದೆ.

- ಸ್ವಂತಖರ್ಚಿನಲ್ಲಿ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಲುಇಚ್ಚಿಸುವಕೋವಿಡ್ ರೋಗಿಗಳು ಸರ್ಕಾರ ನಿಗಧಿಪಡಿಸಿರುವ ಕೆಳಕಂಡ ದರಗಳ ಮಿತಿಯಲ್ಲಿಚಿಕಿತ್ಸಾ ವೆಚ್ಚವನ್ನು ಸ್ವತಃ ರೋಗಿಗಳೇ ಭರಿಸಬೇಕು.

(ದರಗಳು ದಿನ ಒಂದಕ್ಕೆ)

| | |
|---|---|
| ಜನರಲ್ ವಾರ್ಡ್, ರೂ. 10,000/– | ಹೆಚ್‌ಡಿಯು, ರೂ. 12,000/– |
| ಐಸೊಲೇಷನ್ ಐಸಿಯು ವೆಂಟಿಲೇಟರ್‌ಇಲ್ಲದೆ, ರೂ. 15,000/– | ಐಸೊಲೇಷನ್ ಐಸಿಯು ವೆಂಟಿಲೇಟರ್ ಸಹಿತ, ರೂ. 25,000/– |

- ರಾಜ್ಯದಲ್ಲಿಈವರೆಗೆ74,199ಕೋವಿಡ್ ರೋಗಿಗಳು ಆಯುಷ್ಮಾನ್ ಭಾರತ್‌ಆರೋಗ್ಯಕರ್ನಾಟಕಯೋಜನೆಯಡಿಯಲ್ಲಿಉಚಿತಚಿಕಿತ್ಸೆ ಪಡೆದುಕೊಂಡಿರುತ್ತಾರೆ. ಈ ಚಿಕಿತ್ಸೆಯ ಬಾಬ್ತು ರೂ.306.47 ಕೋಟಿಗಳ ವೆಚ್ಚ ಭರಿಸಲಾಗುತ್ತಿದೆ.
- ಸರ್ಕಾರಿಕೋಟಾದಲ್ಲಿಚಿಕಿತ್ಸೆ ಪಡೆಯುತ್ತಿರುವಕೋವಿಡ್ ರೋಗಿಗಳಿಗೆ ರೆಮ್ಡಿಸಿವಿರ್ ಇಂಜೆಕ್ಷನ್ ಸಹ ಉಚಿತವಾಗಿ ನೀಡಲಾಗುತ್ತಿದೆ.
- ಸಾರ್ವಜನಿಕರುಯೋಜನೆಯ ಮಾಹಿತಿಗಾಗಿ ಹತ್ತಿರದ ಸರ್ಕಾರಿಆಸ್ಪತ್ರೆ, ಆರೋಗ್ಯ ಸಹಾಯವಾಣಿ 104 ಹಾಗೂ ಟೋಲ್ ಫ್ರೀ ಸಂಖ್ಯೆ: 1800 425 8330 & 1800 425 2646 ಅನ್ನು ಸಂಪರ್ಕಿಸಬಹುದು.
- ಹೆಚ್ಚಿನ ವಿವರಗಳಿಗಾಗಿ Website: www.sast.gov.in/home &www.arogya.karnagtaka.gov.inಅನ್ನು ನೋಡಬಹುದು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

# Ayushman Bharat Arogya Karnataka Scheme

## Bengaluru, September 21 (Karnataka Information)

On occasion of completion of two years of Ayuahsman Bharat (AB-PMJAY) scheme on 23.9.2020 in the country. The progress of the scheme is as under.

- “Arogya Karnataka” was introduced by Government of Karnataka on 2.3.2018, with the goal of providing Universal Health Coverage to all residents of the State. The Government of India later introduced Ayushman Bharat. Since both Arogya Karnataka

and Ayushman Bharat schemes have the same goal, scope and similar modalities, both the schemes were integrated under a co-branded name called "Ayushman Bharat-Arogya Karnataka" and is being implemented in an Assurance Mode from October 30, 2018.

- 'Ayushman Bharat Arogya Karnataka' is a Universal Health Coverage (UHC) scheme in Karnataka, providing health care to all 6.50 crore people in the state.
- Cashless treatment for 115 lakh BPL families, entitled up to Rs.5.00 lakh per family, per year
- Treatment for 19 lakh APL familiesfor whom Government covers30 per cent of the procedure package rate with a cap of Rs. 1.50 lakh per annum per family.
- AyushmanBharat ArogyaKarnataka scheme has1,650 treatmentpackages.
- PDS card and Aadhaar card are the eligibility criteria of the scheme.
- Patients should first go to the nearest Public Health Institutions (PHIs) with their Adhaar Card and Food Card.
- If the PHI has capacity to treat the disease, the treatment will be provided in the suffering patient in the same hospital
- If the PHI has no capacity or capability to treat the disease, the patient will be given a referral and he will be able to get treatment in any private or government empanelled hospitals of his choice.
- In case of emergency treatments, patient can go directly to any government and private empanelled hospitals without referral. There are 169 such emergency procedures.
- 9.38 lakh patients were treated under Ayushman Bharat Arogya Karnataka scheme during the last two years, amounting to Rs. 1,950crores.
- 3,391 public and private hospitals have been empanelled under the scheme for the treatment of beneficiaries
- 1.40crore health cards have been issued under the Ayushman Bharat Arogya Karnataka Scheme.

**Covid-19 Treatment under AB-ArK.**

- Covid patients in the state are also being treated under the Ayushman Bharat Arogya Karnataka Scheme.
- COVID treatment is completely free under government quota for all BPL and APL categories, migrant workers and inter-state returnees that do not possess PDS card.
- Remdesivir injection is also given free of cost to Covid patients treated under government quota.
- Any patient who wishes to go directly to private hospital as private patient will have to bear the cost of treatment himself within the limits fixed by the government as given below.

| | | |
|---|---|---|
| (1) General ward | – | Rs.10,000/- |
| (2) HDU | - | Rs.12,000/- |
| (3) Isolation ICU without ventilator | – | Rs.15,000/- |
| (4) Isolation ICU with ventilator | – | Rs.25,000/- |

- So far 74,199 Covid patients have been treated free of cost under Ayushman Bharat Arogya Karnataka scheme in the state, amounting to Rs. 306.47crore.
- For information contact nearest Government Hospital, Helpline 104 and Toll Free: 1800 425 8330 and 1800 425 2646 says official press release.

## ಸೆಪ್ಟೆಂಬರ್ ಅಂತ್ಯದವರೆಗೆ ಶಾಲೆ/ಪದವಿಪೂರ್ವ ಕಾಲೇಜಿಗೆ ಭೇಟಿ ನೀಡಲು ಅನುಮತಿ ಇಲ್ಲ

**ಬೆಂಗಳೂರು, ಸೆಪ್ಟಂಬರ್ 21 (ಕರ್ನಾಟಕ ವಾರ್ತೆ)**

**ಕೋವಿಡ್ –2019 ಹಿನ್ನೆಲೆಯಲ್ಲಿ ರಾಜ್ಯದ ಸರ್ಕಾರಿ/ಅನುದಾನಿತ/ಅನುದಾನ ರಹಿತ ಶಾಲಾ ಕಾಲೇಜುಗಳನ್ನು ಪ್ರಾರಂಭಿಸುವ ಬಗ್ಗೆ ಕೇಂದ್ರ ಸರ್ಕಾರದ ಗೃಹ ಮಂತ್ರಾಲಯದ ಮಾರ್ಗಸೂಚಿ ದಿನಾಂಕ 29–08–2020 ರಲ್ಲಿ ಮಾರ್ಗಸೂಚಿಯಂತೆ ಕಂಟೈನ್‌ಮೆಂಟ್ ಜೋನ್ ಹೊರತುಪಡಿಸಿ 9 ನೇ ತರಗತಿಯಿಂದ 12 ನೇ ತರಗತಿಯವರೆಗಿನ ವಿದ್ಯಾರ್ಥಿಗಳಿಗೆ ಶಾಲೆಯನ್ನು ದಿನಾಂಕ 21–09–2020 ರಿಂದ ತೆರೆದು ವಿದ್ಯಾರ್ಥಿಗಳು ಸಂದೇಹ ಪರಿಹಾರಕ್ಕಾಗಿ ಶಾಲೆಗಳಿಗೆ ಭೇಟಿ ನೀಡಬಹುದೆಂದು ಅನುಮತಿ ನೀಡಲಾಗಿತ್ತು. ಆದರೆ, ಕೊರೋನ ಕಡಿಮೆಯಾಗದ ಹಿನ್ನಲೆಯಲ್ಲಿ ಸೆಪ್ಟಂಬರ್ ಅಂತ್ಯದವರೆಗೆ ಶಾಲೆ/ಪದವಿಪೂರ್ವ ಕಾಲೇಜುಗಳಿಗೆ ವಿದ್ಯಾರ್ಥಿಗಳು ಭೇಟಿ ನೀಡುವದನ್ನು ಹಿಂಪಡೆಯಲಾಗಿದೆ.**

ಈ ಸಂಬಂಧ ವಿವರವಾಗಿ ಪರಿಶೀಲಿಸಿದ ನಂತರ ಕರ್ನಾಟಕ ರಾಜ್ಯದಲ್ಲಿ ಪ್ರಸ್ತುತ ಕೋವಿಡ್ –19 ಹಬ್ಬುತ್ತಿರುವ ಪ್ರಮಾಣ ಕಡಿಮೆಯಾಗದ ಕಾರಣ, ಈಗಿನ ಪರಿಸ್ಥಿತಿಯಲ್ಲಿ ಶಾಲೆಗಳಿಗೆ ವಿದ್ಯಾರ್ಥಿಗಳು ಬರುವುದು ಕ್ಷೇಮಕರವಲ್ಲ ಎಂದು ಅಭಿಪ್ರಾಯಪಡಲಾಗಿದೆ.

ಆದಕಾರಣ, ಸೆಪ್ಟೆಂಬರ್ –2020 ಅಂತ್ಯದವರೆಗೆ ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜುಗಳ ವಿದ್ಯಾರ್ಥಿಗಳನ್ನು ಶಾಲೆ/ಪದವಿ ಪೂರ್ವ ಕಾಲೇಜುಗಳಿಗೆ ಭೇಟಿ ನೀಡಲು, ಅನುಮತಿ ನೀಡದಿರಲು ತೀರ್ಮಾನಿಸಲಾಗಿದೆ. ಪರಿಸ್ಥಿತಿಯ ಅವಲೋಕನೆಯ ನಂತರ ಮುಂದಿನ ತೀರ್ಮಾನವನ್ನು ತಿಳಿಸಲಾಗುವುದೆಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿ ಎಸ್.ಆರ್. ಉಮಾಶಂಕರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ದತ್ತು ಸ್ವೀಕಾರ

**ಬೆಂಗಳೂರು, ಸೆಪ್ಟೆಂಬರ್ 21 (ಕರ್ನಾಟಕ ವಾರ್ತೆ) ಮೈಸೂರು ಮೃಗಾಲಯದ ಪ್ರಾಣಿಗಳ ದತ್ತು ಸ್ವೀಕಾರ ಯೋಜನೆ ಅಡಿಯಲ್ಲಿ ಪ್ರಿಯಾಂಕ ಮತ್ತು ವಿನೀತ್‌ಮಟ್, ಬೆಂಗಳೂರು ಇವರು ಘರಿಯಾಲ್ ನ್ನು ಅಕುಲ್ ಎಸ್. ಆನಂದೂರು ಮಹಾರಾಷ್ಟ್ರ ಇವರು ಆಮೆ ಮತ್ತು ಕೆರೆ ಹಾವು, ಬಿ.ಆರ್. ಹಿರೀಶ್ ಗೌಡ, ಬೆಂಗಳೂರು ಇವರು ನವಿಲು, ಜೆ.ಎಸ್.ಎಸ್. ಲಾ ಕಾಲೇಜು ಮೈಸೂರು ಇವರು ಸೀಲ್‌ಗಾಯ್ ನ್ನು ದತ್ತು ಸ್ವೀಕಾರ ಮಾಡಿರುತ್ತಾರೆಂದು ಅಧಿಕೃತ ಪ್ರಕಟಣೆ ತಿಳಿಸಿದೆ.**